INTERNATIONAL CENTRE *for* THEORETICAL SCIENCES

ICTS

TATA INSTITUTE OF FUNDAMENTAL RESEARCH

**ಕಾರ್ಯಾಲಯದಲ್ಲಿಮ ಹಿಳೆಯರ ಕಿರುಕುಳದ ತಡೆ ಹಾಗೂ ಪರಿಹಾರ ವಿಭಾಗದ ಸಂಯೋಜನೆ**

**(CPRSHWW)**

===================================

**https://www.icts.res.in/cprshww**

# ಕಾರ್ಯಾಲಯದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳದ ತಡೆ ಹಾಗೂ ಪರಿಹಾರಕ್ಕಾಗಿ ಮಾರ್ಗಸೂಚಿಗಳು

ICTS-TIFR ತನ್ನ ಉದ್ಯೋಗಿಗಳಿಗೆ, ವಿದ್ಯಾರ್ಥಿಗಳಿಗೆ ಮತ್ತು ಅತಿಥಿಗಳಿಗೆ ಒಂದು ವೃತ್ತಿಪರ ಕಲಿಕೆಯ ಹಾಗೂ ಕೆಲಸದ ಪರಿಸರವನ್ನು ಕಾಯ್ದುಕೊಳ್ಳಲು ಬದ್ಧವಾಗಿದೆ. ಲಿಂಗ ತಾರತಮ್ಯ ಮತ್ತು ಸೂಕ್ತವಲ್ಲದ ಲೈಂಗಿಕ ನಡವಳಿಕೆಯನ್ನು ತಡೆಯುವುದು "ಲೈಂಗಿಕ ಕಿರುಕುಳ ದೂರುಗಳ ಸಂವಿಭಾಗ"ದ ಕಟ್ಟಾಜ್ಞೆಯಾಗಿದೆ. ಇದನ್ನು ಎಲ್ಲಾ ICTS ನೌಕರರಲ್ಲಿ ಲಿಂಗ ಸೂಕ್ಷ್ಮತೆ ಮತ್ತು ನ್ಯಾಯಪರತೆಯನ್ನು ಉತ್ತೇಜಿಸುವ ಮೂಲಕ ಅತ್ಯುತ್ತಮವಾಗಿ ಸಾಧಿಸಬಹುದು. ICTSನ ಒಬ್ಬ ಸದಸ್ಯರಾಗಿ ನೀವು ತಿಳಿದಿರಬೇಕಾದ ಅಂಶಗಳು ಇಲ್ಲಿವೆ.

## ಲೈಂಗಿಕ ಕಿರುಕುಳವೆಂದರೇನು?

ಲೈಂಗಿಕ ಕಿರುಕುಳವು, ಪ್ರತ್ಯಕ್ಷವಾಗಿ ಅಥವಾ ಸೂಚನೆಯ ಮೂಲಕ, ಇಷ್ಟವಿಲ್ಲದ ಲೈಂಗಿಕ ನಡವಳಿಕೆಯನ್ನು ಒಳಗೊಂಡಿರುತ್ತದೆ. ದೈಹಿಕ ಸಂಪರ್ಕ ಮತ್ತು ಸನ್ನೆಗಳು, ಲೈಂಗಿಕ ಸಹಕಾರಕ್ಕೆ ಬೇಡಿಕೆ ಅಥವಾ ಮನವಿ, ಲೈಂಗಿಕ ಛಾಯೆಯಿರುವ ಟಿಪ್ಪಣಿಗಳು ಅಥವಾ ಅಶ್ಲೀಲ ಚಿತ್ರಗಳನ್ನು ತೋರಿಸುವುದು, ಮತ್ತು ಇತರ ಇಷ್ಟವಿಲ್ಲದ, ದೈಹಿಕ, ಮೌಖಿಕ ಅಥವಾ ಮೌಖಿಕವಲ್ಲದ ನಡತೆಯನ್ನು ಲೈಂಗಿಕ ಕಿರುಕುಳವೆಂದು ಪರಿಗಣಿಸಬಹುದು.

ಲೈಂಗಿಕ ಕಿರುಕುಳವು ಒಳಗೊಂಡಿರುವ ಸನ್ನಿವೇಶಗಳೆಂದರೆ

i. ಇಷ್ಟವಿಲ್ಲದ ಲೈಂಗಿಕ ಮುನ್ನಡೆ, ಲೈಂಗಿಕ ಸಹಕಾರಕ್ಕೆ ಬೇಡಿಕೆ, ಹಾಗೂ ಲೈಂಗಿಕ ಸ್ವರೂಪದ ಮೌಖಿಕ ಅಥವಾ ದೈಹಿಕ ನಡವಳಿಕೆಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ, ಉದ್ಯೋಗ, ಬೋಧನೆ, ಓರ್ವ ವ್ಯಕ್ತಿಯ ಯಾವುದೇ ಶೈಕ್ಷಣಿಕ ಅಥವಾ ಕ್ಯಾಂಪಸ್ ಚಟುವಟಿಕೆಯಲ್ಲಿ ಅಥವಾ ಶೈಕ್ಷಣಿಕ ಮೌಲ್ಯಮಾಪನದಲ್ಲಿ ಷರತ್ತಾಗಿ ಹಾಕಿದಾಗ;

ii. ಇಷ್ಟವಿಲ್ಲದ ಲೈಂಗಿಕ ಮುನ್ನಡೆ, ಮೌಖಿಕವಾಗಿ ಅಥವಾ ಅಮೌಖಿಕವಾಗಿ, ಲೈಂಗಿಕ ಅರ್ಥ ಬರುವ ಮಾತುಗಳು, ಸುಳ್ಳುಸುದ್ದಿ, ಟೀಕೆ ಅಥವಾ ಹಾಸ್ಯ, ಪತ್ರಗಳು, ದೂರವಾಣಿ ಕರೆ ಅಥವಾ ಇಮೇಲ್, ಸನ್ನೆಗಳು, ಅಶ್ಲೀಲ ಚಿತ್ರಗಳನ್ನು ತೋರಿಸುವದು, ಕಾಮುಕ ನೋಟಗಳು, ದೈಹಿಕ ಸಂಪರ್ಕ ಅಥವಾ ದೈಹಿಕ ಕಿರುಕುಳ, ಹಿಂಬಾಲಿಸುವುದು, ಅವಹೇಳನಕಾರಿಯಾದ ಶಬ್ದಗಳು ಅಥವಾ ಪ್ರದರ್ಶನದಂತ ಸನ್ನಿವೇಶಗಳಿಂದ ಓರ್ವ ವ್ಯಕ್ತಿಯ ಕಾರ್ಯಾಚರಣೆಯ ಮೇಲೆ ಪ್ರಭಾವ ಬೀರುವ ಅಥವಾ ಒಂದು ಬೆದರಿಕೆಯ, ಪ್ರತಿಕೂಲದ ಅಥವಾ ಆಕ್ರಮಣಕಾರಿಯಾದ ಕ್ಯಾಂಪಸ್ ಪರಿಸರವನ್ನು ಉಂಟುಮಾಡುವ ಉದ್ದೇಶ ಅಥವಾ ಪರಿಣಾಮವನ್ನು ಹೊಂದಿದಾಗ,

ಮೇಲಿರುವುದು ಒಂದು ಸಮಗ್ರವಾದ ಪಟ್ಟಿಯಲ್ಲ.

## ದೂರು ನೀಡುವುದು

ದೂರುಗಳನ್ನು ಮೌಖಿಕವಾಗಿ, ಲಿಖಿತವಾಗಿ ಅಥವಾ ಇಮೇಲ್ ಮೂಲಕ ಸಂವಿಭಾಗದ ಯಾವುದೇ ಸದಸ್ಯರಿಗೆ ಅಥವಾ ICTSನ ಯಾವುದೇ ಅಧ್ಯಾಪಕ ವರ್ಗದವರಿಗೆ ನೀಡಬಹುದು. ಮೌಖಿಕವಾಗಿ ದೂರುಗಳನ್ನು ನೀಡುವವರಿಗೆ ಆ ದೂರನ್ನು ಲಿಖಿತವಾಗಿ ನೀಡಲು ಸಹಾಯ ಒದಗಿಸಲಾಗುವುದು. ದೂರುಗಳನ್ನು ಪೀಡಿತರು ಅಥವಾ ಮೂರನೆಯ ವ್ಯಕ್ತಿಗಳು (ಅನ್ಯಾಯಕ್ಕೊಳಗಾದವರ ಲಿಖಿತ ಅನುಮತಿಯೊಡನೆ) ನೀಡಬಹುದು

## ಪರಿಹಾರ

ದೂರನ್ನು ಪಡೆದ ನಂತರ ಮಹಿಳಾ ಸಂವಿಭಾಗವು ಒಂದು ಸಮಿತಿಯನ್ನು ನಿಯೋಜಿಸುತ್ತದೆ. ಈ ಸಮಿತಿಯು ಪ್ರಕರಣವನ್ನು ಪರಿಶೀಲಿಸಿ ಸಂಬಂಧಪಟ್ಟ ವ್ಯಕ್ತಿಯ(ಗಳ) ವಿರುದ್ಧ ಶಿಸ್ತು ಕ್ರಮವನ್ನು ಕೈಗೊಳ್ಳಲು ಮತ್ತು ಮುಂದಿನ ಕಾರ್ಯಾಚರಣೆಯನ್ನು ಶಿಫಾರಸು ಮಾಡುತ್ತದೆ. ನೀಡಿರುವ ದೂರು ಸುಳ್ಳೆಂದು ಸಾಬೀತಾದರೆ, ಸಮಿತಿಯು ದೂರು ನೀಡಿದ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳಲು ಶಿಫಾರಸು ಮಾಡುತ್ತದೆ.

## ICTSನಲ್ಲಿ ಆರೋಗ್ಯಕರ ವಾತಾವರಣವನ್ನು ಕಾಪಾಡಿಕೊಳ್ಳಲು ಕೆಲವು ಸಲಹೆಗಳು

### ಮಾಡಬಾರದವುಗಳ ಪಟ್ಟಿ (X)

- × ಅನುಮತಿಯಿಲ್ಲದೆ ಯಾರನ್ನೂ ದೈಹಿಕವಾಗಿ ಸ್ಪರ್ಶಿಸಬೇಡಿ. ಇನ್ನೊರ್ವ ವ್ಯಕ್ತಿಯು ಬಹಿರಂಗವಾಗಿ (ಹಾಗೂ ದಬ್ಬಾಳಿಕೆಯಿಲ್ಲದೆ) ಸ್ಪರ್ಶಕ್ಕೊಪ್ಪಿಕೊಂಡರೆ ಮಾತ್ರಹಾಗೆ ಮಾಡಿ.
- × ಲೈಂಗಿಕ ಟೀಕೆಗಳು ಅಥವಾ ಹಾಸ್ಯಗಳನ್ನುಮಾಡಬೇಡಿ ಅಥವಾ ಯಾವುದೇ ಲಿಂಗ ಅಥವಾ ವರ್ಗದ ಜನರನ್ನುಅವಮಾನಿಸಬೇಡಿ.
- × ಯಾರ ಅನುಮತಿಯಿಲ್ಲದೆ ಅವರ ಧ್ವನಿಮುದ್ರಣ, ಭಾವಚಿತ್ರವನ್ನುಅಥವಾ ವಿಡಿಯೋವನ್ನುತೆಗೆಯಬೇಡಿ.
- × ಲೈಂಗಿಕ ಪ್ರಕೃತಿಯ ಯಾವುದೇ ಖಾಸಗಿ ಲಿಖಿತ ದಾಖಲೆ, ಬಹುಮಾಧ್ಯಮ, ಭಾವಚಿತ್ರ, ವೀಡಿಯೋ ಅಥವಾ ಧ್ವನಿಮುದ್ರಣವನ್ನುಇಮೇಲ್, ಸಾಮಾನ್ಯಪೋಸ್ಟ್ ಸಾಮಾಜಿಕ ಜಾಲತಾಣ ಅಥವಾಇತರ ಜಾಲತಾಣಗಳಲ್ಲಿ ಹಂಚಕೂಡದು

### ಮಾಡಬೇಕಾದವುಗಳ ಪಟ್ಟಿ (√)

- √ ICTSನಲ್ಲಿ ಎಲ್ಲರೊಡನೆ ಗೌರವದಿಂದ ನಡೆದುಕೊಳ್ಳಿ.
- √ ಓರ್ವ ವ್ಯಕ್ತಿಯು ಒಂದು ಸಂವಾದದ ಸಮಯದಲ್ಲಿ ಕೋಣೆಯ ಬಾಗಿಲು ತೆರೆದಿರಬೇಕೆಂದು ಕೇಳಬಹುದು.
- √ ಓರ್ವ ವ್ಯಕ್ತಿಯು ಒಂದು ಸಭೆ ನಿಗದಿತ ಕೆಲಸದ ಸಮಯದಲ್ಲಿ ನಡೆಯಬೇಕು ಹಾಗೂ ನಿರ್ಜನ ಪ್ರದೇಶದಲ್ಲಿ ನಡೆಯಬಾರದು ಎಂದು ಮನವಿ ಮಾಡಬಹುದು.
- √ ಓರ್ವ ವ್ಯಕ್ತಿಯು, ಸಭೆಗಳು ಮತ್ತು ಅಧ್ಯಯನ ಗೋಷ್ಠಿಗಳು, ಹೊರಗಿನಿಂದ ಸೀಮಿತ ಪ್ರವೇಶವಿರುವ ಕೋಣೆಗಳು ಅಥವಾ ಖಾಸಗಿ ಕೋಣೆಗಳಲ್ಲಿ (ಉದಾ: ವಸತಿಗೃಹದ ಮಲಗುವ ಕೋಣೆ) ನಡೆಯುವ ಬದಲು ಚೆನ್ನಾಗಿ ಬೆಳಕಿರುವ ಸಾರ್ವಜನಿಕ ಸ್ಥಳಗಳಲ್ಲಿ ನಡೆಸಬೇಕೆಂದು ವಿನಂತಿಸಬಹುದು.

===========================================

**ಅಪನಂಬಿಕೆ ಅಥವಾ ಅಪಹಾಸ್ಯಕ್ಕೆ ಹೆದರಿ ಮೌನವಾಗಿರಬೇಡಿ**

===========================================